<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 294/2024**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಮುನಿರಾಜು | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಶ್ರೀನಿವಾಸ್ | 6 | 7 |
| ವಯಸ್ಸು | 35 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **26.03.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಮಾದನಾಯಕನಹಳ್ಳಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ನಿಶಾನೆ.ಪಿ. 13 ರ ನೋಟೀಸ್ ನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 13 (ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಶಾನೆ.ಪಿ. 4 ರ ಮಹಜರ್ ನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 4 (ಸಿ) ಎಂದು ಗುರುತಿಸಲಾಯಿತು. ಸುಮಾರು 1 ವರ್ಷಗಳ ಹಿಂದೆ ನಾನು ಮಾದನಾಯಕನಹಳ್ಳಿಯ ಲೋಬೋ ಮೈದಾನದ ಬಳಿ ಜನ ಸೇರಿದ್ದು ಅಲ್ಲಿ ನಾನು ಸಹ ಹೋಗಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ನಿಶಾನೆ.ಪಿ. 13 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ. ನಿಶಾನೆ.ಪಿ. 4 ರ ಒಕ್ಕಣೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ನಿಶಾನೆ.ಪಿ. 2 ಮತ್ತು 3 ರಲ್ಲಿ ಫೋಟೋಗಳಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 05.09.2024 ರಂದು ಮಧ್ಯಾಹ್ನ 3.30 ಕ್ಕೆ ರಮಣರಾವ್ ಲೇಔಟ್ ನಿಂದ ಲೋಬೋ ಲೇಔಟ್ ಗೆ ಹೋಗುವ ರಸ್ತೆಯ ಪಕ್ಕ ಪೊಲೀಸರ ಸಮಕ್ಷಮ ಮಹಂತೇಶ್ ರವರು ದಿನಾಂಕ

04.09.2024 ರಂದು ಮದಾರಿ 1.15 ಕ್ಕೆ ಆತನ ಅಣ್ಣ ಈಶ್ವರ್ ಗೌಡ ಫೋನ್ ಮಾಡಿ ತಕ್ಷಣ ಬರುವಂತೆ ಹೇಳಿದ್ದು ನಂತರ ನಾನು ನಮ್ಮ ಅಣ್ಣ ಹೇಳಿದ ಸ್ಥಳಕ್ಕೆ ಹೋದಗ ಆತನ ಎದೆಯ ಬಳಿ ರಕ್ತ ಬರುತ್ತಿದ್ದು ಸುಸ್ತಾಗಿದ್ದು ನಾವು ವಾಹನದಲ್ಲಿ ಹೋಗುತ್ತಿದ್ದಾಗ ರೋಹಿತ್ ಗೌಡ ಸಿಕ್ಕಿದ್ದು ರಮಣ ಲೇಔಟ್ ಬಿಡು ಎಂದು ಕೇಳಿದಾಗ ಹಿಂಬದಿಯಲ್ಲಿ ಕುಳಿಸಿಕೊಂಡು ಬರುತ್ತಿದ್ದಾಗ ಆರೋಪಿ ನನಗೆ ಅನುಮಾನವಾಗುಂತೆ ಬೈದಿದ್ದೀಯ ಎಂದು ಚಾಕುವಿನಿಂದ ಬೆನ್ನಿಗೆ ತಿವಿದಿದ್ದು ನಾನು ಸ್ಪರ್ಷ ಆಸ್ಪತ್ರೆಗೆ ನಮ್ಮ ಅಣ್ಣನನ್ನು ದಾಖಲು ಮಾಡಿದ್ದು ನಂತರ ಅಲ್ಲಿಂದ ರಕ್ತ ಮತ್ತು ಮಣ್ಣು, ಡ್ರಾಗರ್, ಹತ್ತಿ, ಪ್ಯಾಂಟ್ ಟಿ ಶರ್ಟ ಜಪ್ತಿ ಮಾಡಿದ್ದರು ಎಂದರೆ ಸರಿ ಅಲ್ಲ. ಈ ಬಗ್ಗೆ ಮಹಜರ್ ಮಾಡಿದ್ದು ನಾನು ಬರೆದು ಓದಿ ಹೇಳಿದ ನಂತರ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆ ಸ್ಥಳದಲ್ಲಿ ಮಹಜರ್ ಕಾಲಕ್ಕೆ ಫೋಟೋಗಳನ್ನು ತೆಗೆದಿದ್ದು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು : ಸಮಯ ಕೋರಿದ್ದು, ಸಕಾರಣ ಇಲ್ಲದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.